ವಿಷಯ: ಕಾಚೇನಹಳ್ಳಿ ಆಂಜನೇಯಪುರ ಮತ್ತು ಕಾಮಸಮುದ್ರದ ಮೂರನೇ ಹಂತದ ಏತ ನೀರಾವರಿ ಯೋಜನೆಯ ಪ್ರಗತಿ.

218 (1243)

ಶ್ರೀ ಬಿ.ಶಿವರಾಮು (ಗಂಡಸಿ): ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕಾಚೇನಹಳ್ಳಿ ಆಂಜನೇಯಪುರ ಮತ್ತು ಕಾಮ ಸಮುದ್ರ 3ನೇ ಹಂತದ ಏತ ನೀರಾವರಿ ಯೋಜನೆಗಳನ್ನು ಸ್ಥಗಿತಗೊಳಿಸಲು ಕಾರಣವೇನು?

2) ಮೇಲಿನ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಆಲೋಚನೆ ಸರ್ಕಾರಕ್ಕೆ ಇದೆಯೇ? ಹಾಗಿದ್ದಲ್ಲಿ ನಿಖರವಾಗಿ ಯಾವಾಗ ಕೈಗೆತ್ತಿಕೊಳ್ಳುವುದು?

3) ಮೇಲಿನ ಯೋಜನೆಗಳಿಗೆ ಖರ್ಚು ಮಾಡಿರುವ ಹಣವೆಷ್ಟು? ಮತ್ತು ಯಾವ ಹಂತದಲ್ಲಿದೆ?

4) ಸದರಿ ಯೋಜನೆಯನ್ನು ಕೈಗೊಂಡಿರುವ ಗುತ್ತಿಗೆದಾರರಿಗೆ ಹಣವನ್ನು ಪಾವತಿ ಮಾಡಲಾಗಿದೆಯೇ?

ಶ್ರಿ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು):

1) **ಕಾಚೇನಹಳ್ಳಿ ಏತ ನೀರಾವರಿ ಯೋಜನೆ:**

ಯೋಜನೆಯ ಕಾರ್ಯಸಾಧ್ಯತೆ ಹಾಗೂ ನೀರಿನ ಲಭ್ಯತೆ ಬಗ್ಗೆ ಸ್ಪಷ್ಟವಾಗಿ ಸಾಬೀತುಪಡಿಸಬೇಕಿರುವುದರಿಂದ ಇದರ ಪರಿಶೀಲನೆಗಾಗಿ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿದೆ.

ಕಾಮಸಮುದ್ರ 3ನೇ ಹಂತ ಏತ ನೀರಾವರಿ ಯೋಜನೆ:

ಯೋಜನೆಯ ಕಾರ್ಯಸಾಧ್ಯತೆ ಹಾಗೂ ನೀರಿನ ಲಭ್ಯತೆ ಬಗೆ ಸ್ಪಷ್ಟವಾಗಿ ಸಾಭೀತುಪಡಿಸಿಕೊಂಡು ಹೇಮಾವತಿ ಉಪ ಕೊಳ್ಳದ ವಾಟರ್ ಪ್ಲ್ಯಾನಿಂಗನ್ನು ಪರಿಷ್ಕರಿಸಬೇಕಿರುವುದರಿಂದ ಕಾಮಗಾರಿಯನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ.

ಆಂಜನೇಯಪುರ ಏತ ನೀರಾವರಿ ಯೋಜನೆ:

ಈ ಯೋಜನೆಯ ಉದ್ದೇಶಿತ ಅಚ್ಚು ಪ್ರದೇಶವು ಯಗಚಿ ಎಡದಂಡೆ ಕಾಲುವೆಯಲ್ಲಿ ಓವರ್‌ಲ್ಯಾಪ್ ಆಗುತ್ತಿರುವುದರಿಂದ ಈ ಅಚ್ಚುಕಟ್ಟು ಪ್ರದೇಶವನ್ನು

ಯಗಚಿ ಯೋಜನೆಯ ಎಡದಂಡೆ ಕಾಲುವೆಯು ಹರಿ ನೀರಾವರಿಯಲ್ಲಿ ಬರುವುದರಿಂದ ಸದರಿ ಯೋಜನೆಯನ್ನು ಸ್ಥಗಿತಗೊಳಿಸಲಾಗಿದೆ.

2) ಹೌದು. ಪರಿಶೀಲನೆಯ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

3) **ಕಾಚೇನಹಳ್ಳಿ ಏತ ನೀರಾವರಿ ಯೋಜನೆ:** ರೂ. 1.67 ಕೋಟಿಗಳು ನಾಲೆಗಳ ಮಣ್ಣಿನ ಆಗೆತದ ಕೆಲಸಗಳು ಭಾಗಶಃ ಮಾಡಲಾಗಿರುತ್ತದೆ.

ಕಾಮಸಮುದ್ರ 3ನೇ ಹಂತ ಏತ ನೀರಾವರಿ ಯೋಜನೆ: ಯಾವುದೇ ಕಾಮಗಾರಿಯನ್ನು ಕೈಗೆತ್ತಿಕೊಂಡಿರುವುದಿಲ್ಲ ಹಾಗೂ ಹಣ ಖರ್ಚಾಗಿರುವುದಿಲ್ಲ.

ಆಂಜನೇಯಪುರ ಏತ ನೀರಾವರಿ ಯೋಜನೆ: ರೂ. 1.17 ಕೋಟಿಗಳು ಇನ್‌ಟೇಕ್ ಚನಾಲ್ ಹಾಗೂ ಕಾಲುವೆಗಳ ಕಾಮಗಾರಿಗಳು ಭಾಗಶಃ ಮಾಡಲಾಗಿರುತ್ತದೆ.

4) **ಕಾಚೇನಹಳ್ಳಿ ಏತ ನೀರಾವರಿ ಯೋಜನೆ:** ಸುಮಾರು 85 ಲಕ್ಷಗಳನ್ನು ಪಾವತಿಸಬೇಕಿದೆ.

ಕಾಮಸಮುದ್ರ 3ನೇ ಹಂತ ಏತ ನೀರಾವರಿ ಯೋಜನೆ: ———

ಆಂಜನೇಯಪುರ ಏತ ನೀರಾವರಿ ಯೋಜನೆ: ಗುತ್ತಿಗೆದಾರರಿಗೆ ಯಾವುದೇ ಹಣ ಬಾಕಿ ಇರುವುದಿಲ್ಲ.

ಶ್ರೀ ಬಿ.ಶಿವರಾಮ್: ಏತ ನೀರಾವರಿ ಬಗ್ಗೆ ಹಿಂದೆ ಕೂಡ ಚರ್ಚೆ ಮಾಡಿದ್ದೇವೆ. ತಾಂತ್ರಿಕವಾಗಿ ಆಡಳಿತಾತ್ಮಕ ಮಂಜೂರಾತಿ ನೀಡಿ ಕೆಲಸಗಳನ್ನು ಪ್ರಾರಂಭಿಸಿ, ಒಂದಕ್ಕೆ ಪೂರ್ತಿ ಕಂಟ್ರಾಕ್ಟರ್ ಬಿಲ್ಲನ್ನು ಪಾವತಿಸಿದ್ದಾರೆ, ಮತ್ತೊಂದಕ್ಕೆ ಎಪ್ಪತ್ತೈದು ಲಕ್ಷ ರೂಪಾಯಿ ಕೊಡಬೇಕಾಗಿದೆ. ಕಾಮಸಮುದ್ರ ಮೂರನೇ ಹಂತಕ್ಕೆ ಕೆಲಸ ಪ್ರಾರಂಭ ಆಗುವುದಕ್ಕಿಂತ ಮುಂಚೆ ನಿಲ್ಲಿಸಿದ್ದೀರಿ. ಇದಕ್ಕೆ ನನ್ನ ಪ್ರಮುಖ ಪ್ರಶ್ನೆ ಏನೆಂದರೆ, ನೀರಿನ ಲಭ್ಯತೆಯನ್ನು ಪಡೆದುಕೊಂಡ ನಂತರ ಮುಂದಕ್ಕೆ ತೆಗೆದುಕೊಳ್ಳುತ್ತೇವೆ ಎನ್ನುವಂತಹ ಮಾತನ್ನು ತಾವು ಹೇಳುತ್ತೀರಿ. ನೀರಿನ ಲಭ್ಯತೆ ಸ್ಪಷ್ಟೀಕರಣ ಕೋರಿ ನೀವು ತಡೆ ಕೊಟ್ಟಿದ್ದು ಯಾವಾಗ? ನಂತರದ ಸ್ಥಿತಿಯನ್ನು ಏನಾದರೂ ಪರಿಶೀಲನೆ ಮಾಡಿದ್ದೀರಾ?

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ, ರೀ-ಜನರೇಷನ್ 50 ಪರ್ಸೆಂಟ್ ಕೌಂಟ್ ಮಾಡಿಕೊಂಡು ಎಷ್ಟು ನೀರು ಲಭ್ಯ ಇದೆ ಎಂದು ಟೆಕ್ನಿಕಲ್ ಕಮಿಟಿಗೆ ಹಾಕಿದ್ದೇವೆ, ಅಲ್ಲಿಂದ ತರಿಸಿಕೊಂಡು ಕೂಡಲೇ ವ್ಯವಸ್ಥೆಮಾಡುತ್ತೇವೆ.

ಶ್ರೀ ಬಿ.ಶಿವರಾಮ್:- ನಾನು ಕೇಳಿರುವ ಪ್ರಶ್ನೆಗೆ ತಾವು ಉತ್ತರ ಹೇಳಲಿಲ್ಲ, ನೀರಿನ

ಲಭ್ಯತೆಯನ್ನು ಮತ್ತೆ ರೀಎಕ್ಸಾಮ್ ಮಾಡಿಸುತ್ತೇವೆಂದು ಮಾತು ಹೇಳಿ ಯಾವಾಗ ಅದಕ್ಕೆ ತಡೆ ಕೊಟ್ಟಿದ್ದೀರಿ? ನಂತರ, ಆ ಭಾಗದಲ್ಲಿ ಇಟ್ಟುಕೊಂಡಿರತಕ್ಕಂಥ ಹೇಮಾವತಿ ಬೇಸಿನ್ ಅಥವಾ ಕಾವೇರಿ ಬೇಸಿನ್‌ನಲ್ಲಾದರೂ ಬೇರೆ ಯಾವುದೂ ಏತ ನೀರಾವರಿಯನ್ನು ತಾವು ಮಂಜೂರಾತಿ ಮಾಡಿಲ್ಲವೇ?

ಶ್ರೀ ಕೆ.ಎನ್.ನಾಗೇಗೌಡ: ಇದಕ್ಕೆ ಮೇ-95ರಲ್ಲಿ ತಡೆ ಕೊಟ್ಟಿದ್ದೇವೆ. 1998ರಲ್ಲಿ ನಾನು ಬಂದಾದಮೇಲೆ ಇವರನ್ನು ಸೇರಿಸಿಕೊಂಡು ಎರಡು ಬಾರಿ ಮೀಟಿಂಗ್ ಮಾಡಿದ್ದೇವೆ. ಅವರು ಬೇರೆ ಯಾವುದನ್ನು ಮಾಡಿಲ್ಲವೇ ಎಂದು ಕೇಳುತ್ತಿದ್ದಾರೆ, ಬೇರೆ ಮಾಡಿದ್ದೇವೆ. ಮಾಡಿರತಕ್ಕಂಥ ನೀರಿನ ಲಭ್ಯತೆಯನ್ನು ಆಧರಿಸಿ, ಸುಮಾರು ನಾಲ್ಕು ಸಾವಿರ ಎಕರೆಗೆ ರಂಗೇನಹಳ್ಳಿ ಎನ್ನತಕ್ಕಂಥ ಏತ ನೀರಾವರಿ ಮಾಡಿದ್ದೇವೆ. ನಮ್ಮ ಉದ್ದೇಶ, ಏವತ್ತಾರು ಸಾವಿರ ಎಕರೆಯಲ್ಲಿ ಹೇಮಾವತಿ ರೈಟ್ ಬ್ಯಾಂಕ್ ಹೈಲೆವಲಿನಲ್ಲಿ ಕ್ಯಾನಲ್‌ನಲ್ಲಿ ಮಾಡಬೇಕೆಂದು ಇತ್ತು. Out of 66,000, acres we have achieved 48,000 acres. For the remaining 4,000 acres, ನಮ್ಮಲ್ಲಿ ನೀರು ಇದೆ ಎಂದು ಆಧರಿಸಿ ಇದನ್ನು ಮಾಡಿದ್ದೇವೆ. ಇನ್ನು ಉಳಿದಿರುವಂತಹ 14 ಒರಿಜಿನಲ್ ಪ್ಲಾನ್‌ಗಳಲ್ಲಿ 10 ಲಿಫ್ಟ್ ಇರೀಗೇಷನ್, 4 ಕೆನಾಲ್ಸ್ ಇವೆ. ಮಾನ್ಯ ಸದಸ್ಯರು ಕೇಳಿರುವ ಮೂರು ಏತ ನೀರಾವರಿಗಳು ಒರಿಜಿನಲ್ ಪ್ಲಾನ್‌ನಲ್ಲಿ ಇಲ್ಲ. ಹೇಮಾವತಿಯಲ್ಲಿ ಈಗಿರುವ ನೀರಿನ ಪ್ರಮಾಣ 78.687 ಇದೆ. ಈ ಎಲ್ಲಾ ಯೋಜನೆಗಳನ್ನು ಕಾರ್ಯಗತಗೊಳಿಸಬೇಕಾದರೆ ನಮಗೆ ಸುಮಾರು ಮೂರರಿಂದ ನಾಲ್ಕು ಟಿಎಂಸಿ ನೀರು ಕಡಿಮೆ ಬೀಳುವ ಸಾಧ್ಯತೆ ಇದೆ ಎಂದು ನಾವು ಆಲೋಚಿಸಿದ್ದೇವೆ. ಆದ್ದರಿಂದ ಅಲ್ಲಿ ದೊರಕುವ ನೀರಿನ ಲಭ್ಯತೆಯನ್ನು ಸ್ಟಡಿ ಮಾಡಿ, ಮಾಡಿಸಿ ಕೊಡುತ್ತೇನೆ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಬಿ.ಶಿವರಾಮ್: ಇದೀಗ ತಾನೇ ಮಾನ್ಯ ಸಚಿವರು ಮೇ-95ರಲ್ಲಿ ತಡೆ ಕೊಟ್ಟಿದ್ದೇವೆಂದರು. ಆ ಭಾಗದಲ್ಲಿ ಏತ ನೀರಾವರಿಗೆ ಪುನಃ ಮಂಜೂರಾತಿಯನ್ನು ಕೊಟ್ಟಿದ್ದೇವೆಂದು ಮಾನ್ಯ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ನೀರಿನ ಲಭ್ಯತೆ ಇಲ್ಲದಿದ್ದರೆ ಆ ಭಾಗದಲ್ಲಿ ಏತ ನೀರಾವರಿ ಯೋಜನೆಗೆ ಮಂಜೂರಾತಿ ಮಾಡಲು ಎಲ್ಲಿ ಅವಕಾಶವಿದೆ? ಇದನ್ನು ತಾವು ಯಾವ ಕಾರಣಕ್ಕಾಗಿ ಸ್ಥಗಿತಗೊಳಿಸಿದ್ದೀರಿ? ಯಾವ ಕಾರಣಕ್ಕಾಗಿ ತಡೆ ಕೊಟ್ಟಿದ್ದೀರಿ? ತಾವು ಟಿಕ್ನಿಕಲ್ ಒಪೀನಿಯನ್‌ನಲ್ಲಿ ವಾಟರ್ ಅಲೋಕೇಷನ್ ಫೈನಲ್ ಆಗುವವರೆಗೆ ಮಾಡುವುದಿಲ್ಲವೆಂದು ಟಿಎಸಿಯಲ್ಲಿ ಒಂದು ವರದಿ ಇದೆ. ತೀರ್ಮಾನವಾಗದೇ ಈಗಾಗಲೇ ಮಂಜೂರಾತಿ ಮಾಡಿದ್ದು ಏಕೆ? ಮಾನ್ಯ ಸಚಿವರು, ರಂಗೇನಳ್ಳಿಯಲ್ಲಿ ಮಾಡಿದ್ದೇವೆಂದರು, ಹಾಗೂ ಚಿಕ್ಕಮಂಗಳೂರಿನ ಜಿಲ್ಲೆಯಲ್ಲಿ ಮತ್ತೊಂದು ಮಾಡುತ್ತೇವೆಂದು ಅಲ್ಲಿ ಶಂಕುಸ್ಥಾಪನೆ ಕಾರ್ಯವನ್ನು ಕೂಡ ಮಾಡಿದ್ದಾರೆ, ಕಾವೇರಿ ಬೇಸಿನ್ ವ್ಯಾಪ್ತಿಯಲ್ಲಿ ಬರುವ ತಮ್ಮ ಕ್ಷೇತ್ರದಲ್ಲಿ ಮತ್ತೊಂದು ಮಾಡಿದ್ದಾರೆ. ಆದರೆ ಈ ಭಾಗದಲ್ಲಿ ಬರುವ ಏತ ನೀರಾವರಿ ಯೋಜನೆಗಳಿಗೆ ಹಿಂದೆ

ತಾವು ಕೊಟ್ಟಿರುವ ಟೆಕ್ನಿಕಲ್ ಒಪೀನಿಯನ್ ಇದ್ದು, ಈಗಾಗಲೇ ಸಾಕಷ್ಟು ಹಣ ಖರ್ಚಾಗಿದೆ. ಕಾಚೇನಹಳ್ಳಿ ಏತ ನೀರಾವರಿ ಯೋಜನೆಗೆ 1.67 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೀರಿ. ಅಂಜನೇಯಪುರ ಏತ ನೀರಾವರಿ ಯೋಜನೆಗೆ 1.17 ಕೋಟಿ ರೂ.ಗಳು ಖರ್ಚಾಗಿವೆ. ಕಾಮಸಮುದ್ರದ ಒಂದು, ಎರಡು, ಹಂತದ ಯೋಜನೆಯನ್ನು ಮುಗಿಸಿ ಮೂರನೇ ಹಂತವನ್ನು ಸ್ಥಗಿತಗೊಳಿಸುವಂಥ ಕೆಲಸ ಮಾಡುತ್ತಿದ್ದೀರಿ. ಏಕೆ? what it implies? ಇದಕ್ಕೆ ಪೊಲಿಟಿಕಲ್ ವಿಲ್ ಇಲ್ಲ ಅಷ್ಟೇ. ಅದಕೋಸ್ಕರ ತಾವು ಸ್ಪಷ್ಟೀಕರಣ ಕೊಡಬೇಕು. ತಾವು ಮೊದಲು ಕೈಗೊಂಡಿರುವ ಯೋಜನೆಗಳಿಗೆ ಏನು ತಾಂತ್ರಿಕವಾಗಿ, ಆಡಳಿತಾತ್ಮಕ ಮಂಜೂರಾತಿ ಪಡೆದು ಕೆಲಸವನ್ನು ಪ್ರಾರಂಭಿಸಿದ್ದೀರಿ, ಇವುಗಳನ್ನು ಪೂರೈಸಿ ನಂತರ ಬೇರೆ ಯೋಜನೆಗಳ ಕಡೆಗೆ ಗಮನಹರಿಸಬೇಕು. ನಾನು ಸ್ಪಷ್ಟವಾಗಿ ಹೇಳುವುದಾದರೆ ಇದನ್ನು ತಾವು ಯಾವುದೋ ಒಂದು ದೃಷ್ಟಿಯನ್ನು ಇಟ್ಟುಕೊಂಡು ಈ ಜಿಲ್ಲೆಯಲ್ಲಿ ನಮಗೆ ಬರತಕ್ಕಂಥ ಕೆಲಸಗಳನ್ನು ನಿಲ್ಲಿಸತಕ್ಕಂಥ ಕೆಲಸ ಮಾಡುತ್ತೀರಿ ಎನ್ನುವಂತಹ ಮಾತನ್ನು ನಾನು ಹೇಳಬಯಸುತ್ತೇನೆ. ಇದು ಸರಿಯಲ್ಲ, ಆದ್ದರಿಂದ ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಏಕೆಂದರೆ ನಾವು ಕೇಳಿದರೆ ಕರೆದು ಮಾತನಾಡುತ್ತೇವೆ ಎನ್ನುತ್ತಾರೆ, ಈಗಾಗಲೇ ಮೂರು ಬಾರಿ ಕರೆದು ಮಾತನಾಡಿದ್ದಾರೆ, ಕೆಲಸ ಪ್ರಾರಂಭವಾಗದಿದ್ದರೆ ಮಾತನಾಡಿದರೆ ಏನು ಉಪಯೋಗ?

ಉಪಾಧ್ಯಕ್ಷರು: ತಾವು ಆಯವ್ಯಯದ ಭಾಷಣದ ಮೇಲೆ ಮಾತನಾಡುವ ರೀತಿಯಲ್ಲಿ ಮಾತನಾಡಿದರೆ ಹೇಗೆ?

ಶ್ರೀ ಬಿ.ಶಿವರಾಮ್: ಆಯವ್ಯಯ ಭಾಷಣದಲ್ಲಿ ಹೇಳಿದ್ದೇವೆ, ಹಾಗೂ ಮಾತನಾಡಿದ್ದೇವೆ. Political will is required.

ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ಈಗ ದುಡ್ಡು ಖರ್ಚು ಮಾಡಿದ್ದೀರಿ, ದುಡ್ಡು ಖರ್ಚು ಮಾಡುವಾಗ ಸರ್ಕಾರಕ್ಕೆ ಬುದ್ಧಿ ಇರಲಿಲ್ಲವೆ? ಆ ಸಮಯದಲ್ಲಿ ಇದನ್ನು ಎಕ್ಸಾಮಿನ್ ಮಾಡಿರಲಿಲ್ಲವೆ? ಏಕೆ ನಿಲ್ಲಿಸಿದ್ದೀರಿ? ಅಲ್ಲಿ ಏನಾಗಿದೆ ಎಂದರೆ ಅಲ್ಲಿ ಪ್ರಾರಂಭಿಸಿದ ಯಾವ ಲಿಫ್ಟ್ ಇರೀಗೇಷನ್ ನಿಲ್ಲುವುದಿಲ್ಲ. ಶಿವಾರಾಮ್‌ರವರ ಕ್ಷೇತ್ರಕ್ಕೆ ಅನೂಕೂಲವಾಗುತ್ತದೆ ಎಂದು ಇದು ರಾಜಕೀಯ ಕಾರಣ ಎಂದು ಹೇಳಬಹುದಾ ನಾವು? ಸ್ವಲ್ಪ ಇಚ್ಚಾಶಕ್ತಿಯಿಟ್ಟುಕೊಂಡು ಕೆಲಸ ಮಾಡಿಸಿ, ಏಕೆ ನಿಲ್ಲಿಸಿದ್ದೀರಿ? ದುಡ್ಡು ಈಗಾಗಲೇ ಖರ್ಚಾಗಿದೆ, ಇನ್‌ಫ್ಲಕ್ಚುಅನ್ ಎಕ್ಸ್‌ಪಂಡೀಚರ್ ಆಗುತ್ತದೆ, ಯಾರು ಕೊಡುತ್ತಾರೆ? ಇದರಿಂದ ಜನಕ್ಕೆ ಅನುಕೂಲವಿಲ್ಲ.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ನಂಜೇಗೌಡರು ಹೇಳಿದಹಾಗೆ ಪೊಲಿಟಿಕಲ್ ವಿಲ್ ಇಟ್ಟುಕೊಳ್ಳೋಣ, ಇಟ್ಟುಕೊಳ್ಳಬಾರದೆಂದೇನೂ ಇಲ್ಲ...

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇದರಲ್ಲಿ ಯಾವ ರೀತಿ ಪೊಲಿಟಿಕಲ್ ವಿಲ್ ಎಂದು ಕೇಳುತ್ತಿರುವುದು..

ಶ್ರೀ ಕೆ.ಎನ್.ನಾಗೇಗೌಡ: ಅವರು ಕೊಟ್ಟಿರುವ ಪೊಲಿಟಿಕಲ್ ವಿಲ್ What political will he is having, the same I am having. ಆಂಜನೇಯಪುರ ಏತ ನೀರಾವರಿ ಯೋಜನೆಯಲ್ಲಿ ಯಗಚಿ ಡ್ಯಾಂನಲ್ಲಿ ಬರತಕ್ಕಂಥದ್ದು, ಫ್ಲೋ ಇರೀಗೇಷನ್‌ನಲ್ಲಿ ಕವರ್ ಆಗುತ್ತದೆ ಎನ್ನತಕ್ಕಂಥದ್ದು, ಟಿಕ್ನಿಕಲ್ ಒಪೀನಿಯನ್ ಇದು ನಿಜ. ಇದಕ್ಕೆ ನಾವು ಸುಮಾರು 115 ಲಕ್ಷ ರೂ. ಹಣ ಖರ್ಚು ಮಾಡಿರುವುದು ನಿಜ. ಹಾಗೂ ಕಾಚೇನಹಳ್ಳಿ ಯೋಜನೆಗೂ ಕೂಡ 1.67 ಕೋಟಿ.ರೂ. ಖರ್ಚು ಮಾಡಿದ್ದೇವೆ. 14 ಲಿಫ್ಟ್ ಇರಿಗೇಷನ್ 78ರ ಟಿಎಂಸಿಯ ಒರಿಜಿನಲ್ ಪ್ಲಾನ್‌ನಲ್ಲಿ ಸೇರಿಕೊಂಡಿವೆ, ಇದು ಮಾನ್ಯ ಗೌಡರಿಗೂ ಕೂಡ ಗೊತ್ತಿದೆ. ಇವು ಮೂರು ಒರಿಜಿನಲ್ ಪ್ಲಾನ್‌ನಲ್ಲಿ ಸೇರಿಲ್ಲ. ಅವರು ರಂಗೇನಹಳ್ಳಿಯಲ್ಲಿ ಮಾಡಿದ್ದಿರಲ್ಲಾ ಎಂದು ಕೇಳುತ್ತಿದ್ದಾರೆ. 58 ಸಾವಿರ ಎಕರೆಯಲ್ಲಿ ಮೂರು ಸಾವಿರ ಎಕರೆಯನ್ನು ಸೇವ್ ಮಾಡಿ ಆ ನೀರಿನಲ್ಲಿ ಆ ಲಿಫ್ಟ್ ಇರೀಗೇಷನ್ ಆ ಯೋಜನೆಯನ್ನು ಮಾಡಿರುವುದು. ಸಾವಿರಾರು ಕೋಟಿ ರೂ.ಗಳನ್ನು ಖರ್ಚು ಮಾಡಿದ್ದರೂ ಏಕೆ ಮಾಡಲಿಲ್ಲವೆಂದು ಕೇಳುತ್ತಾರೆ? ಈಗ ತೆಗೆದಿರುವ ಕೆನಾಲ್ ಇನ್ಫಾಸ್ಟ್ರಕ್ಚರ್ ಉಪಯೋಗಿಸಿಕೊಂಡು, ಟಿಕ್ಕಿಕಲ್ ಕಮಿಟಿಯವರ ಜೊತೆಯಲ್ಲಿ ಮಾತನಾಡಿದ್ದೇನೆ, ಇನ್ನು ಎರಡು ತಿಂಗಳೊಳಗಾಗಿ ಅವರನ್ನು ಕರೆಸಿ, ಇದಕ್ಕೆ ಆಡಾಳಿತಾತ್ಮಕ ಮಂಜೂರಾತಿ ನೀಡಿ ಕೆಲಸ ಪ್ರಾರಂಭಿಸುತ್ತೇನೆ.

ವಿಷಯ: ಬಾಗೇಪಲ್ಲಿ ಹತ್ತಿರ ಹೊಸ ಕೆರೆ ನಿರ್ಮಾಣ.

219 (1313)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿ ತಾಲ್ಲೂಕಿನಲ್ಲಿ ಹರಿಯುವ ಚಿತ್ರಾವತಿ ನದಿಗೆ ಅಡ್ಡಲಾಗಿ ಬಾಗೇಪಲ್ಲಿ ಹತ್ತಿರ ಹೊಸ ಕೆರೆ ನಿರ್ಮಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ಹೊಸ ಕೆರೆ ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಈ ಸಾಲಿನ ಆಯವ್ಯಯದಲ್ಲಿ ಈ ಉದ್ದೇಶಕ್ಕಾಗಿ ಸರ್ಕಾರ ಮೀಸಲಿಟ್ಟ ಹಣವೆಷ್ಟು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):